# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 259/2022

(ಫ್ರಾಸಾ-2 ಚಾಸಾ-18 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 01.02.2023

| | | |
|---|---|---|
| ಸಾಕ್ಷಿದಾರರ ಹೆಸರು | - | ರಾಜೇಂದ್ರ |
| ತಂದೆಯ ಹೆಸರು | - | ದೇವರಾಜ್ |
| ವಯಸ್ಸು | - | 29 ವರ್ಷ, |
| ಉದ್ಯೋಗ | - | ಸೂಪರ್ ವೈಸರ್, |
| ವಾಸ | - | ಹೊಸೂರು, ತಮಿಳುನಾಡು |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ನಾನು ಐಎಸ್ಇಇ (ISEE) ಸ್ಟಾಫಿಂಗ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಏಜೆನ್ಸಿಯಲ್ಲಿ ಸೂಪರ್ ವೈಸರ್ ಆಗಿ 2020 ರಿಂದ ಕೆಲಸ ಮಾಡುತ್ತಿದ್ದೇನೆ. ಮೃತ ಸಾಗರ್ ಈತನ ಪರಿಚಯ ಇದೆ. ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿರುವ ಮಹೀಂದ್ರಾ ಎಲೆಕ್ಟ್ರಿಕ್ ಕಂಪನಿಗೆ ನಾವು ಮ್ಯಾನ್ ಪವರ್ ಒದಗಿಸಿದ್ದೆವು. ಸಾಗರ್ ನನ್ನು ನಮ್ಮ ಏಜೆನ್ಸಿ ಮೂಲಕ ಸದರಿ ಮಹೀಂದ್ರಾ ಎಲೆಕ್ಟ್ರಿಕ್ ಕಂಪನಿಗೆ ಕಳುಹಿಸಿದ್ದೆವು. ದಿಃ15.01.2022 ರಂದು ಬೆಳಗ್ಗೆ ಮಹೀಂದ್ರಾ ಎಲೆಕ್ಟ್ರಿಕ್ ಕಂಪನಿಯ ವ್ಯಾನ್ ನಲ್ಲಿ ಕೆಲಸಕ್ಕೆ ಹೋಗಿದ್ದಾರೆ. ಮಹೀಂದ್ರಾ ಎಲೆಕ್ಟ್ರಿಕ್ ಕಂಪನಿಯ ಪಂಚಿಂಗ್ ಮಷಿನ್ ಪ್ರಕಾರ ಆತ ಆ ದಿನ ಸಂಜೆ 7 ಘಂಟೆಗೆ ಕಂಪನಿಯಿಂದ ಹೊರಗೆ ಹೋಗಿದ್ದಾರೆ. ನಾವು ಮ್ಯಾನ್ ಪವರ್ ಒದಗಿಸುವುದರಿಂದ ನಾವು ಒದಗಿಸಿದ ಸಿಬ್ಬಂದಿ ಕೆಲಸಕ್ಕೆ ಹೋದ ಬಗ್ಗೆ ದಿನ ಹಾಜರಾತಿಯನ್ನು ಚೆಕ್ ಮಾಡುತ್ತೇವೆ. ಪೋಲಿಸರು ಸಾಗರ್ ನ ಹಾಜರಾತಿ ಬಗ್ಗೆ ಕೇಳಿದ್ದರಿಂದ ನಾನು ಪಂಚಿಂಗ್ ಮಷಿನ್ ನ ದಾಖಲೆಯನ್ನು ಅವರಿಗೆ ಕೊಟ್ಟೆ. ಈಗ ತೋರಿಸಲಾದ ದಾಖಲೆಗಳು ದಿಃ15.01.2022 ರಂದು ಸಾಗರ್ ನ ಹಾಜರಾತಿ ಬಗ್ಗೆ ಪಂಚಿಂಗ್ ಮಷಿನ್ ನ ದಾಖಲೆ ಮತ್ತು ಆ ವಾರದ ಸಾಗರ್ ನ ಹಾಜರಾತಿಯ ದಾಖಲೆ ಮತ್ತು ಪೋಲಿಸರಿಗೆ ನೀಡಿದ ಪತ್ರ ಇವೆ. ಅವುಗಳನ್ನು ನಿಪಿ-2 ರಿಂದ 4 ಎಂದು ಗುರ್ತಿಸಲಾಯಿತು. ಪೋಲಿಸರು ನನ್ನ

ಹೇಳಿಕೆ ಪಡೆದಿದ್ದಾರೆ. ಸಾಗರ್ ಕಡೆಯದಾಗಿ ದಿಃ15.01.2022 ರಂದು ಕೆಲಸ ಮಾಡಿದ್ದಾರೆ.

**ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ವಿಕೆ ವಕೀಲರಿಂದಃ**

2. ಸಾಗರ್ 2021 ರ ಡಿಸೆಂಬರ್ ತಿಂಗಳಿನಲ್ಲಿ ಬಂದ. ಆತನನ್ನು ಮಹೀಂದ್ರಾ ಎಲೆಕ್ಟ್ರಿಕ್ ಕಂಪನಿಗೆ ಸಿಬ್ಬಂದಿಯಾಗಿ ಕಳುಹಿಸಿದ್ದೆವು. 15.01.2022 ರಂದು ಘಟನೆಯಾಗಿದೆ. ಐಎಸ್ಇಇ (ISEE) ಸ್ಟಾಫಿಂಗ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಏಜೆನ್ಸಿ 2001 ರಿಂದ ಕಾರ್ಯ ನಿರ್ವಹಿಸುತ್ತಿದ್ದೆ. ಸಾಗರ್ ಮೃತನಾಗಿದ್ದು ಗೊತ್ತು ಆದರೆ ಹೇಗೆ ಮತ್ತು ಎಲ್ಲಿ ಎಂದು ಗೊತ್ತಿಲ್ಲ. ಪೋಲಿಸರು ಹೇಳಿಕೊಟ್ಟಂತೆ ಈ ದಿನ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 1 ನೇ ಆರೋಪಿ ಪರ ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು